ಅಧ್ಯಕ್ಷರು : ಶ್ರೀ ಎನ್.ಎ. ಹ್ಯಾರೀಸ್ ರವರು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸಚಿವರು ಉತ್ತರ ನೀಡುವುದು.

ಶ್ರೀ ಎನ್.ಎ. ಹ್ಯಾರೀಸ್ : ಮಾನ್ಯ ಅಧ್ಯಕ್ಷರೆ, ನಾನು ಹೇಳಿಬಿಡುತ್ತೇನೆ.

9. ವಿಷಯ : Tourist Taxi **ವಾಹನಗಳಿಗೆ ಜೀವಿತಾವಧಿ ತೆರಿಗೆಯನ್ನು ಹಿಂಪಡೆಯುವ ಬಗ್ಗೆ.**

ಶ್ರೀ ಎನ್.ಎ. ಹ್ಯಾರೀಸ್ (ಶಾಂತಿನಗರ) : Tourist Taxi ವಾಹನಗಳಿಗೆ ಜೀವಿತಾವಧಿ ತೆರಿಗೆಯನ್ನು ತರಲಿಕ್ಕೆ ಏನು ಪ್ರಯತ್ನ ಮಾಡುತ್ತಿದ್ದೀರಿ. ಆದನ್ನು ತಾವು ದಯವಿಟ್ಟು ಕೈ ಬಿಡಬೇಕಾಗುತ್ತದೆ. ಏಕೆಂದರೆ ಸುಮಾರು ಒಂದೂವರೆ ಲಕ್ಷಕ್ಕಿಂತ ಹೆಚ್ಚು ಕುಟುಂಬ ಈ taxi driver ಗಳಾಗಿ taxi car ಅನ್ನು ಇಟ್ಟುಕೊಂಡು ಜೀವನ ಮಾಡುತ್ತಿರುವಂಥವರು ಇದ್ದಾರೆ. ಇದರಿಂದ ಸರ್ಕಾರಕ್ಕೇನೂ ದೊಡ್ಡ income ಆಗುವುದಿಲ್ಲ. ಅವರಿಗೆ ನೀವು life time tax ಹಾಕಿದರೆ ದೊಡ್ಡ amount ಕಟ್ಟಬೇಕಾಗುತ್ತದೆ. ಅದರಲ್ಲೂ ತಾವು ರೂ. 10 ಲಕ್ಷ ಒಂದು limitation ಇಟ್ಟಿದ್ದೀರಿ. ಒಂದು ಇನ್ನೋವಾ ಕಾರಿಗೆ 10–12 ಲಕ್ಷ ರೂಪಾಯಿ ಇದೆ. At least ಅದನ್ನು 25 ಲಕ್ಷಕ್ಕೆ ತೆಗೆದುಕೊಂಡು ಹೋಗಿ ಪ್ಲಸ್ Tourism Development ಮಾಡಬೇಕೆಂದು ಬಹಳ ಪ್ರಯತ್ನ ಪಡುತ್ತಿದ್ದೀರಿ. Taxi Service ಇಲ್ಲವೆಂದರೆ ಎಲ್ಲಿಂದ Tourist development ಆಗುತ್ತದೆ? ಜೊತೆಗೆ Government ಕೂಡ out-source car ಗಳನ್ನು ಮಾಡಿಕೊಳ್ಳುತ್ತಿದ್ದೀರಿ. ನೀವು ಇಲ್ಲಿ ಜಾಸ್ತಿ ಮಾಡಿದರೆ ಅಲ್ಲಿ ನಾವೇ ಜಾಸ್ತಿ ಕೊಡಬೇಕಾಗುತ್ತದೆ. ದಯವಿಟ್ಟು ಸ್ವಲ್ಪ ಇದನ್ನು ಆಲೋಚನೆ ಮಾಡಿ. ಜನರಿಗೆ ನೇರವಾಗಿ ತೊಂದರೆಯಾಗುತ್ತದೆ. ಸರ್ಕಾರ Development Corporation ನಿಂದ loan ಕೊಟ್ಟು car ಗಳನ್ನು ಕೊಡಿಸುತ್ತಿದ್ದೆ. ಅವರಿಗೂ ನೀವು ಮತ್ತೆ life time tax ಕಟ್ಟುವ ಹಾಗೆ ಮಾಡುತ್ತೀರಿ. Basic ಆಗಿ initial amount ಕಟ್ಟಲಿಕ್ಕೆ ಅವರ ಹತ್ತಿರ ದುಡ್ಡು ಇರುವುದಿಲ್ಲ. ಎಲ್ಲಿಂದ tax ಕಟ್ಟುತ್ತಾರೆ ? ಇದರ ಬಗ್ಗೆ ತಾವು ಒಂದು

ತೀರ್ಮಾನ ತೆಗೆದುಕೊಂಡು ಮೊದಲು ಹೇಗಿತ್ತು ಅದೇ ರೀತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಉತ್ತರ ಹೇಳಿ, ಕುಳಿತುಕೊಳ್ಳಿ

ಶ್ರೀ ಕೆ. ರಘುಪತಿ ಭಟ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಹ್ಯಾರೀಸ್‌ರವರು ಹೇಳಿದೆ ಹಾಗೆ, life time tax ಅನ್ನು ರೂ. 10 ಲಕ್ಷದೊಳಗೆ ಇದ್ದುದ್ದನ್ನು ಮೇಲ್ ಮಾಡಿದರೆ Private taxi ಗಳು ಜಾಸ್ತಿ ಆಗುತ್ತವೆ. ಅಧಿಕೃತವಾಗಿ taxi ಮಾಡುವವರು ಹಿಂಜರಿಯುತ್ತಾರೆ. Private taxi ಗಳು ಜಾಸ್ತಿ ಆಗುತ್ತವೆ. ಯಾರೂ tourist taxi ಗಳನ್ನು ಮಾಡವುದಿಲ್ಲ. ಹಾಗಾಗಿ ಮಾನ್ಯ ಹ್ಯಾರೀಸ್‌ರವರು ಹೇಳಿದ ಹಾಗೆ 25 ಲಕ್ಷ ಹೆಚ್ಚು ಮಾಡಿದರೆ, ಈಗ ambassador taxi ಕಾಲ ಹೋಯಿತು, ಎಲ್ಲಾ innova car ನಲ್ಲಿ taxi ಮಾಡುತ್ತಿದ್ದಾರೆ. ಎಲ್ಲರೂ ಮತ್ತೆ ಅನಧಿಕೃತವಾಗಿ ಕಳ್ಳ taxi ಗಳು ಪ್ರಾರಂಭವಾಗುತ್ತವೆ. ಹಾಗಾಗಿ ಮಾನ್ಯ ಹ್ಯಾರೀಸ್ ಹೇಳಿರುವುದಕ್ಕೆ ನಾನು ಒಪ್ಪಿಗೆ ಸೂಚಿಸುತ್ತೇನೆ.

ಶ್ರೀ ಯು.ಟಿ. ಖಾದರ್ : ಇದರಿಂದ ಬಹಳಷ್ಟು ಸಮಸ್ಯೆಯಾಗಿದೆ. ಅದಷ್ಟು ಬೇಗ ರದ್ದುಪಡಿಸಿ ಎಂದು ಆದೇಶ ಹೊರಡಿಸಬೇಕು.

ಅಧ್ಯಕ್ಷರು : ಕುಳಿತುಕೊಳ್ಳಿ, ಸಚಿವರು ಉತ್ತರ ಹೇಳಲಿ.

ಶ್ರೀ ಆರ್. ಅಶೋಕ್ (ಉಪ ಮುಖ್ಯಮಂತ್ರಿಗಳು, ಗೃಹ ಮತ್ತು ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ, ಕೇಂದ್ರ ಸರ್ಕಾರ ದಿನಾಂಕ 13–2–2011 ರಂದು ಸಾರಿಗೆ ಅಭಿವೃದ್ಧಿ ಸಮಿತಿ ಸಭೆ ಮಾಡಿ, ಅಲ್ಲಿ ಎಲ್ಲಾ taxi ಗಳಿಗೆ ಜೀವಾವಧಿ ತೆರಿಗೆಯನ್ನು ವಿಧಿಸಬೇಕೆಂದು ತೀರ್ಮಾನ ಆಯಿತು. ಎರಡನೆಯದಾಗಿ, ತ್ರೈಮಾಸಿಕ ತೆರಿಗೆಯನ್ನು ಏನು ಪಾವತಿ ಮಾಡುತ್ತಾರೆ. ಅದರಲ್ಲಿ ಸರಿಯಾಗಿ ಪಾವತಿ ಮಾಡುವುದಿಲ್ಲ. ಬಹಳಷ್ಟು defaulters ಇದ್ದಾರೆ. ಸರಿಯಾದ ಸಮಯದಲ್ಲಿ ಪಾವತಿ ಮಾಡುವುದಿಲ್ಲ. 2–3 ವರ್ಷ ಪಾವತಿಯನ್ನೇ ಮಾಡುವುದಿಲ್ಲ. ಈ ರೀತಿಯ ಸಮಸ್ಯೆ ಇದೆ. ನೆರೆ ರಾಜ್ಯದಲ್ಲಿ ಎಲ್ಲ ಕಡೆಯೂ ಪೂರ್ತಿ life time tax ಇದೆ. ಆದ್ದರಿಂದ ಈ ಎಲ್ಲಾ ಸಮಸ್ಯೆಗಳಿಂದ ಇದನ್ನು ಜಾಸ್ತಿ ಮಾಡಿರುವಂಥದ್ದು, ಮಾನ್ಯ ಹ್ಯಾರೀಸ್‌ರವರು ಹೇಳಿದರು. ಇನ್ನೋವಾ

ಎಲ್ಲಾ ಸುಮಾರು 11–12 ಲಕ್ಷ ರೂಪಾಯಿ ಆಗುತ್ತದೆ. ಅದಕ್ಕೂ taxi rate ಅಂದರೆ, 3 ತಿಂಗಳಿಗೆ ಒಂದು ಸಾರಿ ಕಟ್ಟುವುದಾದರೆ, life time ಕಟ್ಟುವುದು ಸಮಸ್ಯೆಯಾಗುತ್ತದೆ ಎಂದು ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇನೆ. ನೀವೆಲ್ಲಾ raise ಮಾಡಿದ ಮೇಲೆ ಮಾನ್ಯ ರಘುಪತಿ ಭಟ್‌ರವರು, ಮಾನ್ಯ ಹ್ಯಾರೀಸ್‌ರವರು ಅವರು ನಮಗೆ ಬಹಳ ಸ್ನೇಹಿತರು, ಅದನ್ನು ಜಾಸ್ತಿ ಮಾಡುತ್ತೇವೆ. ಅದನ್ನು ಈಗಾಗಲೇ ನಾನು Finance Department ಗೆ proposal ಅನ್ನು ಕಳುಹಿಸಿ ಜಾಸ್ತಿ ಮಾಡಿ, ಇನ್ನೋವಾ ಈ ರೀತಿ ಏನೇನಿವೆ ಅವೆಲ್ಲಾ ಕಡಿಮೆ ಮಾಡುವುದಕ್ಕೆ ಹೇಳುತ್ತೇನೆ.

ಶ್ರೀ ಎನ್.ಎ. ಹ್ಯಾರೀಸ್ : ಮಾನ್ಯ ಸಚಿವರೆ, ಇಲ್ಲಿ ಹಣ ಕಟ್ಟಿಕೊಳ್ಳುವುದಕ್ಕೆ ಆಗುತ್ತಿಲ್ಲ. ಇವರು ಒಂದೊಂದು ವರ್ಷ ಕಟ್ಟುವುದಿಲ್ಲ. ಅದಕ್ಕೋಸ್ಕರ ಒಂದೇ ಸಾರಿ ಕಟ್ಟಿಸಿಕೊಳ್ಳುತ್ತೇವೆ ಎನ್ನುವುದು ಸರಿಯಿಲ್ಲ. ನೀವು ದಯವಿಟ್ಟು ಕಟ್ಟಲಿಲ್ಲವೆಂದರೆ ನಮ್ಮ ಹತ್ತಿರ ಸರ್ಕಾರ ಇದೆ ನಾವು ಅದನ್ನು ಕಟ್ಟಿಸುವಂತಹ ವ್ಯವಸ್ಥೆ ಮಾಡಬೇಕು. ಅದಕ್ಕೆ ಒಂದೇ ಸಲ Collection ಮಾಡಿದರೆ ಆಗುವುದಿಲ್ಲ. limitation, 10 ಲಕ್ಷ ಇರುವುದನ್ನು 25 ಲಕ್ಷಕ್ಕೆ ಜಾಸ್ತಿ ಮಾಡಿ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ taxi ಹೊಡಿಸುವಂಥವರು ಸುಮಾರು 3 ಲಕ್ಷ, 4 ಲಕ್ಷ 10 ಲಕ್ಷ ದವರೆಗೂ ಇದೆ ಎಂದು ತಿಳಿದುಕೊಂಡಿದ್ದೀರಿ. ಇನ್ನೋವಾ ಈಗ ಅದು ಕೂಡ taxi ಆಗಿ ಓಡುತ್ತಿದೆ. ಇನ್ನೋವಾದವರು ಸುಮಾರು 12 ಲಕ್ಷ ರೂಪಾಯಿದವರೆಗೂ ಇದೆ. ಅದಕ್ಕೆ 15 ಲಕ್ಷದವರೆಗೂ ನಾವು raise ಮಾಡಿದರೆ ಎಲ್ಲಾ ಬಡವರು, ಅಲ್ಪಸಂಖ್ಯಾತರು ಎಂದು ಯಾರು ಹೇಳುತ್ತಿದ್ದಾರೆ ಬಹುಶಃ ಅವರೆಲ್ಲಾ cover ಆಗುತ್ತಾರೆ. ಆದ್ದರಿಂದ ನಾನು Finance ನವರ ಜೊತೆ ಮಾತನಾಡಿ ಅವರನ್ನು ಒಪ್ಪಿಸುತ್ತೇನೆ. Tariff ಜಾಸ್ತಿ ಮಾಡಿದರೆ almost ಎಲ್ಲಾ taxi ಗಳು ಬರುತ್ತವೆ. ಎಲ್ಲಾ ಒಳ್ಳೆಯದಾಗುತ್ತದೆ ಎಂದು ಹೇಳಿದ್ದಾರೆ ಮಾಡುತ್ತೇನೆ.

ಶ್ರೀ ಎನ್.ಎ. ಹ್ಯಾರೀಸ್ : ದಯವಿಟ್ಟು Life time tax ಹಾಕಬೇಡಿ.

ಅಧ್ಯಕ್ಷರು : ಆಯಿತು ಕುಳಿತುಕೊಳ್ಳಿ ಹೇಳಿದ್ದಾರೆ ಮತ್ತೆ ಮತ್ತೆ ಕೇಳುತ್ತೀರಲ್ಲಾ? ಶ್ರೀ ಸುನಿಲ್ ವಿ. ಹೆಗಡೆಯವರು ಮಾತನಾಡುವುದು.

10. ವಿಷಯ : ಜಾಗೃತ ಸಮಿತಿಗಳಿಗೆ ವಿಧಾನ ಪರಿಷತ್ತಿಗೆ ಸದಸ್ಯರನ್ನು ಸಹ ಅಧ್ಯಕ್ಷರನ್ನಾಗಿ ಮಾಡುವ ಬಗ್ಗೆ.

ಶ್ರೀ ಸುನಿಲ್ ವಿ. ಹೆಗಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೆ, ಹಿಂದಿನ ಅಧಿವೇಶನದಲ್ಲಿ ವಿಧಾನ ಪರಿಷತ್ತಿನಲ್ಲಿ ವಸತಿ ಸಚಿವರು ಜಾಗೃತ ಸಮಿತಿಗಳಿಗೆ ವಿಧಾನ ಪರಿಷತ್ತಿನ ಸದಸ್ಯರನ್ನು ಅಧ್ಯಕ್ಷರನ್ನಾಗಿ ಮಾಡುವ ಬಗ್ಗೆ ಚರ್ಚೆಯಾಗಿತ್ತು. ಸರ್ಕಾರ ಸನ್ಮಾನ್ಯ ಸುರೇಶ್ ಕುಮಾರ್‌ರವರು, ಕಾನೂನು ಮಂತ್ರಿಗಳು, ಇದಕ್ಕೊಂದು ಉತ್ತರವನ್ನು ಕೊಟ್ಟು ಈಗ ಯಾವ ರೀತಿಯಲ್ಲಿದೆಯೋ ಅದನ್ನೇ ಮುಂದುವರೆಸುತ್ತೇವೆ. ಯಾವುದೇ ಕಾರಣಕ್ಕೂ ಸಹ ಅಧ್ಯಕ್ಷರನ್ನಾಗಿ ಮಾಡುವುದಿಲ್ಲವೆಂದು ಹೇಳಿದ್ದರು. ಅದರೆ ಮಾನ್ಯ ವಸತಿ ಸಚಿವರು ನಿನ್ನೆ ವಿಧಾನ ಪರಿಷತ್ತಿನಲ್ಲಿ ಮತ್ತೊಮ್ಮೆ ಈ ವಿಷಯವನ್ನು ಕೆದಕಿದ್ದಾರೆ. ಮತ್ತೆ ಅಲ್ಲಿ ಏನು ಹೇಳಿದ್ದಾರೆಂದರೆ ಈ ಯೋಜನೆಗಳ ದುರಪಯೋಗವಾಗದಂತೆ ತಡೆಯಲು ಹಾಗೂ ಆಯ್ಕೆ ಪ್ರಕ್ರಿಯೆ ಪಾರದರ್ಶಕತೆಯನ್ನು ಕಾಪಾಡಲು ಪರಿಷತ್ತಿನ ಸದಸ್ಯರನ್ನು ಸಹ ಅಧ್ಯಕ್ಷರನ್ನಾಗಿ ಮಾಡುವ ಕುರಿತು ಆದೇಶ ಹೊರಡಿಸುತ್ತೇನೆ ಎಂದು ಹೇಳಿದ್ದಾರೆ. ನಾನು ಏನು ಕೇಳುತ್ತಿದ್ದೇನೆಂದರೆ, ನಾವೆಲ್ಲಾ ವಿಧಾನಸಭೆಯ ಸದಸ್ಯರು 225 ಜನ ಇದ್ದೇವೆ. ಇವರು ಹೇಳಿದ್ದು ನೋಡಿದರೆ, ಜಾಗೃತ ಸಮಿತಿಯಲ್ಲಿ ನಾವೆಲ್ಲಾ ದುರುಪಯೋಗ ಮಾಡುತ್ತಿದ್ದೇವೆ. ಪಾರದರ್ಶಕವಾಗಿ ನೀವು ಕೊಡುತ್ತಿಲ್ಲ. ಎನ್ನುವಂಥದ್ದನ್ನು ವಸತಿ ಸಚಿವರೇ ನೇರವಾಗಿ ವಿಧಾನ ಪರಿಷತಿನಲ್ಲಿ ಹೇಳಿದ್ದಾರೆ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಎರಡನೆಯದಾಗಿ, ವಸತಿ ಸಚಿವರಿಗೆ ವಿಧಾನ ಪರಿಷತ್ತಿನ ಸದಸ್ಯರ ಮೇಲೆ ಏಕೆ ಮೋಹ ಎಂದರೆ, ಅವರೂ ಸಹ ವಿಧಾನ ಪರಿಷತ್ತಿನ ಸದಸ್ಯರೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಇಲ್ಲಿ ನಮಗೆ ನ್ಯಾಯ ಒದಗಿಸುತ್ತಾರೆ ಎನ್ನುವಂತಹ ಭರವಸೆ ನಮಗಿಲ್ಲ ಮತ್ತು ಒಂದು ಸಲ House ನಲ್ಲಿ ಇದೆ ಬಗ್ಗೆ ಸರ್ಕಾರ ಉತ್ತರ ಕೊಟ್ಟು ನಂತರ, ಪದೇ ಪದೇ ಈ ವಿಷಯವನ್ನು